## ಶ್ರೀ ಕುವೆಂಪು ಅವರ 'ಸ್ವಾಮಿ ವಿವೇಕಾನಂದ' ಕವನದಿಂದ

ಚಿದ್ ಋತಾಗ್ನಿಯ ಚಂಡಕಾಂತಿಯೆ, ಮೇರು ಸಂನ್ಯಾಸಿ,
ಭರತಖಂಡದ ನಂದಿದಿದ್ದಲಿಗಿತ್ತೆ ತೇಜವನು;
ಬೊಮ್ಮದಂಬುಧಿಗಲೆಯನೀಯುವ ಭರದ ಬಿರುಗಾಳಿ,
ಬೂದಿಮುಚ್ಚಿದ ಭರತಭೂಮಿಯನೂದಿ ಬೆಳಗಿಸಿದೆ !

ಭರತಖಂಡದೊಳರಚುತಲೆಯುವ ಮನುಜಕುರಿಗಳಿಗೆ
ಸಿಂಹಹೃದಯವನಿತ್ತು ಗರ್ಜಿಸುವಂತೆ ನೀ ಮಾಡಿ
ಕುರಿಯ ದೊಡ್ಡಿಯ ಮುರಿದು ಸಿಂಹದ ಗುಹೆಯ ವಿರಚಿಸಿದೆ,
ಸಿಂಹಹೃದಯನೆ, ಶ್ರೀ ವಿವೇಕಾನಂದಯೋಗೀಂದ್ರ !

ನಿಶೆಯ ಗಗನದೊಳುರಿವ ತಾರೆಯ ತೆರದಿ ರಂಜಿಸಿದೆ ;
ಜಗದ ಕಂಗಳು ನೋಡಲಾರದೆ ನಿನ್ನ ತೇಜವನು
ವಿಸ್ಮಯಾಶ್ಚರ್ಯದಲಿ ನಿಂತುವು ಮೂಗುವೆರಗಾಗಿ !
ನಿನ್ನ ಮಹಿಮೆಯ ಸವಿವ ಸೆರೆಯೇ ಮುಕ್ತಿ, ವರಯೋಗಿ!

ನಿನ್ನ ಧೈರ್ಯ ಸ್ಥೈರ್ಯ ದೃಢತೆಯು, ನಿನ್ನ ಪವಿಶಕ್ತಿ
ಭಾರತೀಯರಿಗಿಂದು ಬೇಕಾಗಿಹುದು ದಿವ್ಯಾತ್ಮ !
ರುದ್ರನರ್ತನವೆಸಗು ಹೃದಯದಿ, ಬುದ್ಧಿ ಭೈರವನೆ;
ರುದ್ರಭೂಮಿಗಳಾಗಲೆಮ್ಮೀ ಕ್ಷುದ್ರ ಹೃದಯಗಳು !

## ಕಡೆಂಗೋಡ್ಲು ಶಂಕರಭಟ್ಟ ಅವರ 'ಬ್ರಹ್ಮಾಸ್ಮಿ' ಕವನದಿಂದ

ವೇದನಾಭಿಯೊಳುದಿಸಿ, ಉಪನಿಷತ್ಕಂಠದ ನಿನಾದದಲಿ ನೆರೆದು
ಯೋಗದ ಸಮಾಧಿ ಸಾಕ್ಷಾತ್ಕಾರದಾನಂದ ಧಾರೆಯಲಿ ಸುರಿದು
ಅಶರೀರವಲ್ಲ – ಸಶರೀರವೀ ಧ್ವನಿ
ಮೊಳಗೆ ಲೋಕ ಪುಳಕಿಸಿತು
ಯುಗಧರ್ಮಗುರು, ವಿವೇಕಾನಂದ, ಜಯ! ಎಂದು
ಶಿರವ ಬಾಗಿಸಿತು
ಶತಮಾನಗಳ ಪುಣ್ಯ ಪುಂಜ–ತೇಜೋಬಿಂಬ;
ಇಳಿದು ಬಂತಿಳೆಗೆ;
ಪರಮಹಂಸನ 'ತತ್ತ್ವಮಸಿ' ಯ ಮಂಗಲಮೂರ್ತಿ
ಗೋಚರಿಸಿತೊಳಗೆ
ಮೂಡುಪಡುಗಳು, ಕಡಲುದೀವಿಗಳು,
ಖಂಡಗಳು, ದಾರಿ ಮಾಡಿದವು;
ಭಾರತದ ಮಣ್ಣಿನಲಿ ಕಾಮಧೇನುವ ಕಂಡೆ ಭಿಕ್ಷಾನ್ನವುಂಡೆ
ಸೌರದೀಧಿತಿಯಂತೆ ಭೂಮಂಡಲವ ಸುತ್ತಿ ಮೂಡನೆಡೆಗೊಂಡೆ
ಸತ್ಯದ ಸನಾತನದ ಧರ್ಮದಿಗ್ವಿಜಯಕ್ಕೆ ಕಾವಿಯನು ತೊಟ್ಟೆ
ನಿತ್ಯವೇದಾಂತ ತನ್ಮಯಶೀಲ ಶುದ್ಧಿಯಲಿ ಜೀವನವ ನೆಟ್ಟೆ
ವೇದರ್ಷಿಯ ಸುಬೋಧ, ತತ್ತ್ವದರ್ಶಿಯ ಶೋಧ
ಯೋಗಿಯನುಭೂತಿ
ಆತ್ಮದ ವಿಭೂತಿ ಪಾರ್ಥಿವದ ರೂಪಾದಂದು ಕಂಡುದೀ ರೀತಿ!
ಓ ವಿವೇಕಾನಂದ! ಬ್ರಹ್ಮದೊಡವೆಯೊ ನೀನು !
ಬ್ರಹ್ಮದಿಂ ಬಂದೆ
ಬ್ರಹ್ಮಕ್ಕೆ ಸಂದೆ, 'ಸರ್ವಂ ಬ್ರಹ್ಮಮಯಂ' ಎಂದೆ
'ಬ್ರಹ್ಮಾಸ್ಮಿ' ಯೆಂದೆ.

## ದ.ರಾ.ಬೇಂದ್ರೆ ಅವರ 'ಓ ಭಾರತ ಸಂಚಾರಿಣಿ' ಕವನದಿಂದ

ತಲೆತಲಾಂತರದ ಅವಿವೇಕ ಶಾಲೆ
ಹೊತ್ತಿತ್ತು ದುಃಖಜ್ವಾಲೆ
ಧಗಧಗನೆ ದಹಿಸುತಿದೆ ಒಣತು–ಹಸಿತು
ಕರುಣಿಸಿತೊ ಮೇಘಮಾಲೆ
ಆ ಖಂಡ ಈ ಖಂಡ – ದುಂಡುದುಂಡುಗಖಂಡ
ಉಂಡಿತ್ತು ಧಾರೆಧಾರೆ
ಅದೊ ವಿವೇಕಾನಂದ ಉಕ್ತಿ ಲೀಲೆ
ಮುಕ್ತಶೀಲೆ

## ದ.ರಾ.ಬೇಂದ್ರೆಯವರ 'ಖರ – ವಿವೇಕಾನಂದ ಪ್ರಗಾಥಾ' ಕವಿತೆಯಿಂದ

ಗೌರಿಶಂಕರ ಇತ್ತ, ಇತ್ತ ಕಾಂಚನ ಗಂಗೆ,
ಅತ್ತತ್ತ ಪರಮಹಂಸರ ಸವಾರಿ
ಆತ್ಮಕ್ರೀಡಃ, ಆತ್ಮರತಿಃ, ಸಚ್ಚಿದಾತ್ಮ ವಿಹಾರಿ
ಹೆಜ್ಜೆ ಮೂಡದ ದಾರಿ
ಅಗೋ ವಿವೇಕಾನಂದ ನೀಡಿದನು ದಾರಿ
ಉದಾರಿ, ಶಿಖರದಿಂ ಶಿಖರಕ್ಕೆ ಹಾರಿ
ಆ ಹಾದಿ ಅನಾದಿ ಹೃದಯ ಸಂವಾದಿ
ಸುನಾದಿ, ಸರಿಗಮ ಸನಾದಿ, ವಿಜ್ಞಾನಬೋಧಿ
ಸಂಜ್ಞಾನ ಸಂಬೋಧಿ....

ಸಹವೀರ್ಯಂ ಕರವಾವಹೈ
ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ
ಸಮಾನಿ ವ ಆಕೂತಿಃ ಸಮಾನಾ ಹೃದಯಾನಿ ವಃ
ನಿಃಪಕ್ಷ ವೇದಾಂತ, ಪೂರ್ಣ ಬೋಧಾಂತ
ಇದು ಸ್ವಯಂ ಸಿದ್ಧಾಂತ, ಪರಮಮೃತಾಂಬೋಧಿ.
ಭರತಖಂಡದಾ ಎತ್ತರವನ್ನು ಧ್ರುವ ಮಂಡಲದಾ
ಉತ್ತರವನ್ನು, ಗೊಮ್ಮಟನಾಗಿ ತಟ್ಟಿದ್ದೆ
ಕನ್ಯಾಕುಮಾರಿಯಲಿ ಮುಳುಗಿದ್ದೆ, ಕಾಶ್ಮೀರದ
ಒಳಗಿದ್ದೆ, ಶ್ರೀ ಗುರುವಿನ ಬಳಿಗಿದ್ದೆ
ನಂದಿ ನಾನು, ನಂದಿ ನಾನು, ಆ ವೃಷಭಧ್ವಜ
ಎತ್ತೂ ಬಂದೆನಾ ಶಿವಶಕ್ತಿ ಹೊತ್ತು.

## ಸೇಡಿಯಾಪು ಕೃಷ್ಣಭಟ್ಟರ 'ಸಿಂಹ ರವಿ' ಕವನದಿಂದ

ಏನು ಸೋಜಿಗವೋ ಪೂರ್ವದಿಗಂತದಿ
ತೋರಿತು ಕೆಂಬಣ್ಣ !
ಚೈತನ್ಯದಂಡ ಬಿರಿದೆದ್ದ ಹಂಸ ಶಿಶು
ಕಾಣಿಸಿತು ಕಣ್ಣ
ನರಗುವವರನ ಕಣ್ಬನಿಯಾಯಿತು
ನಕ್ಷತ್ರ ಸಪ್ತವರ್ಣ !
ಕಾಷಾಯ ಕೇಸರವ ಕೆದರಿ
ಮೊಗದೋರಿತು ಸಿಂಹರವಿ
ಹಗಲಾಯಿತು ಸಕಲಭುವಿ!

### ಅರ್ಚಕ ವೆಂಕಟೇಶ ಅವರ 'ಶ್ರೀ ಗುರುವೆ' ಕವನದಿಂದ

ಜಡವೇ ಚೇತನಗೊಂಡು ತಾನೆದ್ದು ಬರುವಂತೆ
ಶಕ್ತಿಯೇ ಮೈದಾಳಿ ಇದಿರೆದ್ದು ಬಂದಂತೆ
ನಿರ್ಭಯವೇ ಸಾಕಾರಮೂರ್ತಿ ತಾನಾದಂತೆ
ಶುದ್ಧ ಸಂಕಲ್ಪವೇ ತಪಕೆ ತಾ ಕುಳಿತಂತೆ ॥

ಲೋಕಸೇವೆಯೇ ಮನುಜ ರೂಪವನೆ ತಳೆದಂತೆ
ಜೀವಕಾರುಣ್ಯವೇ ದೇಹದಲಿ ಬಂದಂತೆ
ಗುರು ಶಿಷ್ಯನಲಿ ನಿಂತು ಉಪದೇಶಗೈದಂತೆ
ಪರಮಹಂಸರ ವಾಣಿ ಅವತಾರವಾದಂತೆ

### ಜಿ.ಎಸ್.ಶಿವರುದ್ರಪ್ಪ ಅವರ 'ಮತ್ತೊಮ್ಮೆ ಮೂಡಿ ಬಾ' ಕವನದಿಂದ

ಭೋರ್ಗರೆವ ಕಡಲಿನೊಡಲಿಗೆ ಧುಮುಕಿ
ತೆರೆಗಳ ಸೀಳಿ, ನಡುಗಡ್ಡೆಯಲಿ ನಿಂತು
ಭಾರತದ ಕನಸ ಕಂಡವ ನೀನು.....

ನುಡಿದ ನುಡಿಯೊಂದೊಂದೂ ಸಿಡಿಲ ಕಿಡಿ;
ನಡೆ, ಪೌರುಷದ ತೇರು ಹರಿದಂತೆ
ನಮ್ಮ ಇಂದಿನ ಬದುಕೊ.. ....

ವಿವೇಕ – ಆನಂದ, ಎರಡೂ ಇರದ
ಕುಹಕದ ಸಂತೆ
ಮತ್ತೊಮ್ಮೆ ಮೂಡಿ ಬಾ
ದಿವ್ಯ ನಿರ್ಭಯ ಧೀರ ಗುರುಮೂರ್ತಿ.
ಬೇಕಾಗಿದೆಯಯ್ಯ ನಮ್ಮ ಈ ಸತ್ತ ದೇಶಕೆ
ನಿನ್ನ ಸಾತ್ವಿಕ ಸ್ಫೂರ್ತಿ.....

### ಜಿ.ಎಸ್.ಶಿವರುದ್ರಪ್ಪ ಅವರ 'ಓ ಬಂದ ಶ್ರೀ ಗುರು ವಿವೇಕಾನಂದ' ಕವನದಿಂದ

ಆ ಧ್ರುವ ಮಂಡಲದಿಂದ
ಮೊರೆಯುವ ಕಡಲಿಗೆ ಹಾರಿ ಧುಮುಕಿದ
ತೆರೆಗಳ ಸೀಳಿದ, ಈಜಿದ, ನುಗ್ಗಿದ
ಘಟ್ಟ ಬಂಡೆಯಲಿ ಬೇರೂರಿದ,
ಬಾನೆತ್ತರ ನೆಗೆದ, ಬೆಳಕಿನ ಗೋಪುರವಾದ

ವಜ್ರದ ಮೈ, ಉಕ್ಕಿನ ನರ, ಕುಡಿಮಿಂಚಿನ ಕಣ್ಣು
ಗುಡುಗಿನ ದನಿ, ಹೊನಲಿನ ನಡೆ
ಎದೆ ಬೆಳದಿಂಗಳ ಹಣ್ಣು !
ಕವಿ, ಋಷಿ, ಯೋಗಿ, ಸಂತ !
ಲೋಕಾದ್ಯಂತ ನಡೆವ ವಸಂತ

### ರಾಘವ ಅವರ 'ಪರಮಹಂಸರ ಮುಂದೆ ಪ್ರಶ್ನೆ ನಿಂತಿತ್ತು' ಕವನದಿಂದ

ಪರಮಹಂಸರ ಮುಂದೆ ಪ್ರಶ್ನೆ ನಿಂತಿತ್ತು,
ಸೆಟೆದು ನಿಂತಿತ್ತು :
ದೇವರನು ಕಂಡಿಹಿರಾ,
ದೇವರನು ತೋರುವಿರಾ ?
ಆಲಿಂಗಿಸಿತು ಶಿಷ್ಯನಾರ್ತವನು ಗುರುಕರುಣೆ,
ಗುರುಪದದ ಪೂರ್ಣತೆಯ ತುಂಬೆ ಶಿಷ್ಯಾಗಮನ
ಕತ್ತಲೆಯ ಕಳೆವ ಉತ್ತರ
ಕಿರಣ ಚಿಮ್ಮಿತಾ ತೇಜದೊಡಲಿಂದ
"ಕಂಡಿಹೆನು ದೇವರನು ನಿನ್ನನೆಂತಂತೆ;
ತೋರುವೆನು ದೇವರನು ನಿನ್ನನೆಂತಂತೆ"
ಪರಮಹಂಸರ ಮುಂದೆ ಪ್ರಶ್ನೆ ಬಾಗಿತ್ತು
ಪಡೆದು ಉತ್ತರವ ದಿವ್ಯ ವರವ.

### ಕಯ್ಯಾರ ಕಿಞ್ಞಣ್ಣ ರೈ ಅವರ 'ವಿವೇಕ ಸ್ಮೃತಿ' ಕವನದಿಂದ

ಬಂಗಾರದ ಬಂಗಾಳದಿ
ಜಾಜ್ವಲಿಸಿದ ಜ್ಯೋತಿ
ಮೂಡಲು ಪಡುವಲು ಹಬ್ಬಿತು
ರವಿ–ಚಂದ್ರಮ ಕಾಂತಿ.

ಈ ಬೆಳಕನು ಹೊಂಬೆಳಕನು
ಕಂಡುಂಡವರಾವು,
ಶತಮಾನದ ಸ್ಮೃತಿಗಾನದಿ
ಕವಿಕಾಣ್ಕೆಯ ಹೂವು.

ದೀನರು ದಲಿತದರಿದ್ರರು
ದೇವರದೇ ರೂಪು ;
ತಳಿರೇ ಹೂವೇ ಹಣ್ಣೇ
ಅರ್ಪಿಸಲದೆ ಸಾಕು.

ಮೇಲುಂಟೇ ಕೀಳುಂಟೇ
ಹರಿಲೀಲಾರಂಗ ;
ಪೆರ್ದೆರೆಯೇ ಕಿರುದೆರೆಯೇ
ಸುರಸಿಂಧುತರಂಗ?

ಕರಿಜನರದು ಬಿಳಿಜನರದು
ಕೆನ್ನೆತ್ತರುವೊಂದು ;
ಒಂದೇ ಜಗ ಒಂದೇ ಜನ
ಪರಮಾತ್ಮನ ಬಿಂದು.

ಅಧ್ಯಾತ್ಮವ ಲೌಕಿಕದಲಿ
ಬಿಂಬಿಸಿದ್ಯೆ ಗುರುವೆ
ಶಿಲೆಯೆಡೆಯಲಿ ಹೊನ್ನಿನ ಹುಡಿ
ತುಂಬಿಸಿ ತೋರಿರುವೆ.



# ವಿವೇಕಾನಂದರ ದೃಷ್ಟಿಯಲ್ಲಿ ಪಾಶ್ಚಾತ್ಯರಿಂದ ನಾವು ಕಲಿಯಬೇಕಾದುದೇನು?

ಎನ್. ಆರ್. ರಾವ್

ಸ್ವಾಮಿ ವಿವೇಕಾನಂದರು ಭಾರತದ ಹಿರಿಮೆ ಗರಿಮೆಗಳನ್ನು ಕೊಂಡಾಡಿದ್ದಾರೆ. ಹಾಗೆಯೇ, ಅದರ ದೌರ್ಬಲ್ಯಗಳನ್ನೂ ದೋಷಗಳನ್ನೂ ನಿರ್ದಾಕ್ಷಿಣ್ಯವಾಗಿ ಎತ್ತಿ ತೋರಿಸಿದ್ದಾರೆ. ಆ ಲೋಪಗಳನ್ನು ತಿದ್ದಿಕೊಳ್ಳಲು ನಾವು ಪಾಶ್ಚಾತ್ಯ ಜನರಿಂದ ಏನೆಲ್ಲ ಕಲಿಯಬೇಕು ಎನ್ನುವುದರ ಬಗ್ಗೆ ವಿಸ್ತಾರವಾಗಿ ತಿಳಿಹೇಳಿದ್ದಾರೆ. ಅದನ್ನು ಇಂದಿನ ಪರಿಸ್ಥಿತಿಗೆ ತುಲನೆ ಮಾಡುತ್ತ, ಎಳೆಎಳೆಯಾಗಿ ನಮ್ಮ ಮುಂದೆ ಬಿಡಿಸಿಟ್ಟಿರುವ ಮುಂಬೈ ನಿವಾಸಿಗಳಾದ ಲೇಖಕರು, ವೃತ್ತಿಯಲ್ಲಿ ವಕೀಲರಾದರೂ, ಪ್ರವೃತ್ತಿಯಲ್ಲಿ ಸಾಹಿತ್ಯ, ಸಂಸ್ಕೃತಿ, ಶಿಕ್ಷಣ, ಅಧ್ಯಾತ್ಮ ಮತ್ತು ಸಂಗೀತದಲ್ಲಿ ಅಪಾರ ಆಸಕ್ತಿ ಹೊಂದಿದ್ದಾರೆ. ಹಾಗೆಯೇ ಗ್ರಂಥರಚನೆ ಕೂಡ ಮಾಡಿದ್ದಾರೆ.

**ಸ್ವಾ**ಮಿ ವಿವೇಕಾನಂದರ ಪೌರಸ್ತ್ಯ, ಪಾಶ್ಚಾತ್ಯ ತತ್ತ್ವಶಾಸ್ತ್ರಗಳ ಅಧ್ಯಯನ, ಹಿಂದೂಧರ್ಮದಲ್ಲಿರುವ ಆಳವಾದ ಜ್ಞಾನ, ಪಾಂಡಿತ್ಯ, ರಾಷ್ಟ್ರಪ್ರೇಮಗಳನ್ನು ಅನುಭವಿಸಿದ ಇವರ ಶಿಷ್ಯರು ಇವರನ್ನು ೧೮೯೩ರ ಜುಲೈ ತಿಂಗಳಲ್ಲಿ ಚಿಕಾಗೋದಲ್ಲಿ ನಡೆಯಲಿದ್ದ ವಿಶ್ವಧರ್ಮ ಸಮ್ಮೇಳನದಲ್ಲಿ ಹಿಂದೂಧರ್ಮವನ್ನು ಪ್ರತಿನಿಧಿಸಲು ಒತ್ತಾಯಿಸಿ, ಅವರ ಪ್ರಯಾಣಕ್ಕೆ ಅನುಕೂಲಗಳನ್ನು ಮಾಡಿಕೊಟ್ಟರು. ಬಡ ರಾಷ್ಟ್ರ, ಬಡ ಜನರ ಉದ್ಧಾರಕ್ಕಾಗಿ, ಯುರೋಪ್, ಅಮೆರಿಕ ಮುಂತಾದ ಶ್ರೀಮಂತ ರಾಷ್ಟ್ರಗಳು ಸಹಯೋಗ, ಸಹಕಾರ ಕೊಡಬೇಕೆಂಬುದಷ್ಟೇ ಅಲ್ಲ, ಅದು ಅವರ ಬಾಧ್ಯತೆಯೂ ಹೌದು ಎಂದು ಮನಗಾಣಿಸುವುದು, ಪಾಶ್ಚಾತ್ಯರೆದುರು ಕೀಳರಿಮೆಯಿಂದ ಬಳಲುತ್ತಿದ್ದ ಹಿಂದೂಗಳಿಗೆ ವಿಶ್ವದಲ್ಲಿ ಸ್ಥಾನಮಾನ ಪ್ರತಿಷ್ಠೆಗಳನ್ನು ತಂದುಕೊಡುವುದು, ನಮ್ಮ ಉನ್ನತ ಅಧ್ಯಾತ್ಮದರಿವನ್ನು ಅವರಿಗೆ ಕೊಟ್ಟು ತಂತ್ರಜ್ಞಾನ ಕಾರ್ಯಕ್ಷಮತೆಗಳನ್ನು ಅವರಿಂದ ಪಡೆದು ವಿಶ್ವಸಾಮರಸ್ಯ ಬೆಳೆಸುವುದು – ಇವನ್ನು ಉದ್ದೇಶವಾಗಿಟ್ಟುಕೊಂಡು ಸ್ವಾಮಿ ವಿವೇಕಾನಂದರು ಅಮೆರಿಕೆಗೆ ಹೋದರು.


ವಿವೇಕಾನಂದರು ತಮ್ಮ ವಿದೇಶ ಪ್ರವಾಸದಲ್ಲಿ ಹಾಂಕಾಂಗ್, ಜಪಾನ್, ಅಮೆರಿಕ, ಜರ್ಮನಿ, ಇಂಗ್ಲೆಂಡುಗಳಲ್ಲಿನ ಜನಜೀವನ, ಅವರ ಸ್ವಭಾವ, ಅಂತಃಸತ್ತ್ವ, ಕಾರ್ಯತತ್ಪರತೆ, ಸಾಮಾಜಿಕ, ಶೈಕ್ಷಣಿಕ, ಆಡಳಿತದ ರೀತಿನೀತಿಗಳು, ಸಂಘಟನಾಶಕ್ತಿ ಮತ್ತು ಅವುಗಳಿಂದ ಅವರು ಪಡೆದಿರುವ ಮುನ್ನಡೆಗಳನ್ನು ಅಭ್ಯಸಿಸಿ, ನಾವು ನಮ್ಮ ಉದ್ಧಾರಕ್ಕೆ, ನಮ್ಮ ರಾಷ್ಟ್ರದ, ಜನರ ಉದ್ಧಾರಕ್ಕೆ ಪಾಶ್ಚಾತ್ಯರಿಂದ ತಿಳಿದು ರೂಢಿಸಿಕೊಳ್ಳಬೇಕಾದ ಧನಾತ್ಮಕ ಮೌಲ್ಯಗಳ ಮೇಲೆ ಕ್ಷಕಿರಣವನ್ನು ಬೀರಿದ್ದಾರೆ. ಅವರ ಅನುಭವದ ಕೆಲ ವಿಚಾರಗಳನ್ನು ಅರಿಯುವುದು ಈ ಲೇಖನದ ಉದ್ದೇಶವಾಗಿದೆ. ಅವರ ವಿಚಾರಗಳು ತಮ್ಮ ಗುರುಭಾಯಿಗಳು ಮತ್ತು ಶಿಷ್ಯರನೇಕರಿಗೆ ಬರೆದ ಪತ್ರಗಳ ಒಕ್ಕಣೆಯಲ್ಲಿ ಹಾಗೂ ಮಿಸ್ ಎಸ್. ಎಲ್ಲೆನ್ ವಾಲ್ಡೋರಂತಹ ಶಿಷ್ಯರು ಬರೆದುಕೊಂಡ ಅವರ ಉಪನ್ಯಾಸಗಳ ಟಿಪ್ಪಣಿಗಳಲ್ಲಿ ಸಿಗುತ್ತವೆ. ಬನ್ನಿ, ಅವುಗಳನ್ನು ತಿಳಿಯೋಣ. ಅವು ಇಂದಿನ ದಿನಗಳಲ್ಲೂ ಎಷ್ಟು ಪ್ರಸ್ತುತವೆಂದು ತಿಳಿದು, ಅನುಷ್ಠಾನಗೊಳಿಸುವ ಪ್ರಯತ್ನ ಮಾಡೋಣ.

ಜಪಾನಿನ ಪಟ್ಟಣಗಳು ಮತ್ತು ಅಲ್ಲಿನ ಜನಜೀವನದ ಪರಿಯನ್ನು ಹತ್ತಿರದಿಂದ ನೋಡಿ ಸ್ವಾಮೀಜಿ ತಮ್ಮ ಪತ್ರಗಳಲ್ಲಿ ಹೀಗೆ ಬರೆಯುತ್ತಾರೆ: ಆಧುನಿಕ ಕಾಲದ ಆವಶ್ಯಕತೆಗಳ ಬಗೆಗೆ ಜಪಾನೀಯರು ಪೂರ್ಣವಾಗಿ ಜಾಗೃತರಾಗಿರುವಂತೆ ಕಾಣುತ್ತದೆ. ಸುವ್ಯವಸ್ಥಿತವಾದ ಸುಸಜ್ಜಿತವಾದ ಸೈನ್ಯವನ್ನು ಅವರು ಹೊಂದಿದ್ದಾರೆ.



ಅವರು ಉಪಯೋಗಿಸುವ ಬಂದೂಕು ಅವರ ಸೈನ್ಯದ ಅಧಿಕಾರಿಯೊಬ್ಬನು ಕಂಡುಹಿಡಿದುದು. ಅದು ಯಾವುದಕ್ಕೂ ಕಡಿಮೆ ದರ್ಜೆಯದಲ್ಲ. ಬೆಂಕಿಕಡ್ಡಿಯ ಕಾರ್ಖಾನೆಗಳು ನೋಡಬೇಕಾದಂಥವು. ಅವರು ತಮಗೆ ಅವಶ್ಯವಾದುದೆಲ್ಲವನ್ನೂ ತಾವೇ ತಯಾರಿಸುವ ಸಂಕಲ್ಪವುಳ್ಳವರು. ತನ್ನದೇ ಸಾರಿಗೆ ಸಂಸ್ಥೆಯ ಜಹಜನ್ನೂ ಜಪಾನ್ ಹೊಂದಿದೆ. ಇದರ ಅನುಷ್ಠಾನದ ಧ್ವನಿಯನ್ನು ಸ್ವಾತಂತ್ರ್ಯಪೂರ್ವ ಸ್ವದೇಶಿ ಚಳವಳಿಯಲ್ಲಿ ಕೇಳಿದೆವಲ್ಲವೆ? ಜಪಾನಿನ ಪ್ರಜೆಗಳ ದೇಶಭಕ್ತಿ, ಕಾರ್ಯಶೀಲತೆ, ಕಷ್ಟಸಹಿಷ್ಣುತೆಯನ್ನು ಕಂಡು, ತಮ್ಮ ದೇಶದ ದುಃಸ್ಥಿತಿಯನ್ನು ನೆನೆಸಿಕೊಂಡು, "ನಮ್ಮ ದೇಶದ ಹಲವಾರು ಜನ ಯುವಕರು ಜಪಾನಿಗೆ ಭೇಟಿ ಕೊಡಬೇಕೆಂಬುದು ನನ್ನ ಅಪೇಕ್ಷೆ. ಉತ್ತಮವೂ ಭವ್ಯವೂ ಆದ ಆದರ್ಶಗಳಿಗೆ ಭಾರತವು ತವರೂರೆಂದು ಜಪಾನೀಯರು ಭಾವಿಸಿದ್ದಾರೆ. ಆದರೆ ನೀವೇನಾಗಿದ್ದೀರಿ? ಒಣಹರಟೆಯಲ್ಲಿ ಜೀವನವನ್ನೆಲ್ಲಾ ಕಳೆಯುತ್ತಿದ್ದೀರಿ. ಇಲ್ಲಿನ ಜನಾಂಗವನ್ನು ನೋಡಿ, ನಿಮ್ಮ ದೇಶಕ್ಕೆ ಹಿಂದಿರುಗಿ ನಾಚಿಕೆಯಿಂದ ತಲೆತಗ್ಗಿಸಿರಿ. ಹೊರಗೆ ಬಂದರೆ ನಿಮ್ಮ ಜಾತಿ ಕೆಡುವುದು. ಶತಶತಮಾನಗಳಿಂದ ಸಮಾಜವನ್ನು ಹಿಂಸಿಸುವುದರಲ್ಲಿಯೇ ನಿಮ್ಮ ಪೌರುಷವೆಲ್ಲಾ ವ್ಯರ್ಥವಾಗಿದೆ. ಐರೋಪ್ಯರು ಬರೆದ ಕೆಲವು ಪುಸ್ತಕಗಳನ್ನು ಓದುವುದು, ಅವುಗಳನ್ನು ಅರ್ಥ ಮಾಡಿಕೊಳ್ಳದೆಯೇ ಅವುಗಳನ್ನೇ ಗಿಳಿಯಂತೆ ಪುನಃ ಪುನಃ ಮುದ್ದುಮುದ್ದಾಗಿ ನುಡಿಯುವುದು– ಇವುಗಳಲ್ಲಿಯೇ ಸಮಯ ಕಳೆಯುತ್ತೀರಿ. ನಿಮ್ಮ ಜೀವನದ ಗುರಿ ಗುಮಾಸ್ತಿಕೆ ಅಥವ ವಕೀಲಿ! ಇದೇ ಭಾರತದ ಯುವಜನರ ಆಕಾಂಕ್ಷೆಯ ಪರಮಾವಧಿ" ಎನ್ನುತ್ತಾರೆ ಸ್ವಾಮೀಜಿ. ನಮ್ಮ ದೇಶದ ನಿಸ್ತೇಜ ಜನರನ್ನು ಬಡಿದೆಬ್ಬಿಸಲು ಇದಕ್ಕಿಂತ ಹೆಚ್ಚಿಗೆ ಏನು ಹೇಳಬೇಕು? ಇಂದು ಕೂಡ ನಮಗೆ ಹಿಡಿದ ಕೈಗನ್ನಡಿಯಲ್ಲವೆ ಇದು? ನಂತರದ ಸಮಯದಲ್ಲಿ, ಹಿರೋಷಿಮಾ ನಾಗಸಾಕಿಯ ದುರಂತಗಳ ನಂತರವೂ ಜಪಾನ್ ತನ್ನನ್ನು ಇಡೀ ವಿಶ್ವದಲ್ಲಿ ತಾಂತ್ರಿಕತೆಯಲ್ಲಿ ಅತ್ಯಂತ ಮುಂದುವರಿದ ದೇಶವನ್ನಾಗಿ ಗುರುತಿಸಿಕೊಂಡಿರುವುದು ನಮಗೆ ವೇದ್ಯ. ಅವರ ಕಷ್ಟಸಹಿಷ್ಣುತೆ, ಪ್ರಾಮಾಣಿಕತೆ, ಸ್ವರಾಷ್ಟ್ರಪ್ರೇಮ, ಅನನ್ಯತೆಯಿಂದ ಮಾಡುವ ಕಾರ್ಯಶೈಲಿ ಅವರ ಪ್ರಗತಿಗೆ ಸಾಕ್ಷಿಯಾಗಿವೆ. ಸ್ವಾಮಿ ವಿವೇಕಾನಂದರು ಇದನ್ನು ಬರೆದಾಗ ನಮ್ಮ ದೇಶ ಆಂಗ್ಲರ ದಾಸ್ಯದಲ್ಲಿತ್ತು. ಈಗ ಸ್ವಾತಂತ್ರ್ಯ ಬಂದಿದ್ದರೂ ಯಾವ ಹೆಚ್ಚಿನ ವ್ಯತ್ಯಾಸಗಳಾಗಿಲ್ಲ. ಸ್ವದೇಶ ಸಂಸ್ಕೃತಿಗಳ ಬಗ್ಗೆ ಈಗಲೂ ನಾವು ಅಭಿಮಾನ್ಯಶೂನ್ಯರೇ. ಜಾಗತೀಕರಣದ ಈಚಿನ ದಿನಗಳು ಹಣ ಸಿಗುವ ದಾಸ್ಯವೃತ್ತಿಗಳನ್ನು ಕಲ್ಪಿಸಿವೆ. ಸ್ವಂತಿಕೆ, ಕಲ್ಪನೆ, ಸೃಷ್ಟಿ, ತಾಂತ್ರಿಕತೆ, ದೂರದೃಷ್ಟಿಯ ಯೋಜನೆಗಳಲ್ಲಿ ನಾವು ಪಾಶ್ಚಾತ್ಯರಿಗಿಂತ ಇನ್ನೂ ಬಹಳ ಹಿಂದಿದ್ದೇವೆ ಎನಿಸುತ್ತದೆ.

ಸ್ವಾಮಿ ವಿವೇಕಾನಂದರು ಶಿಕಾಗೋ ನಗರಕ್ಕೆ ಬಂದು ಸಮ್ಮೇಳನದ ಬಗ್ಗೆ ವಿಚಾರಿಸಲು ಹೋದಾಗ ಗೊತ್ತಾದುದು ಯಾವುದಾದರೂ ಸಂಸ್ಥೆಯ ಪ್ರತಿನಿಧಿತ್ವವಿಲ್ಲದೆ, ಅದರ ಬಗ್ಗೆ ಶಿಫಾರಸು ಪತ್ರವಿಲ್ಲದೆ, ಸಮ್ಮೇಳನದಲ್ಲಿ ಮಾತನಾಡಲು ಅವಕಾಶವಿಲ್ಲವೆಂದು. ಅವರು ಅಲ್ಲಿ ತಲುಪಿದಾಗ ಜುಲೈ ತಿಂಗಳು. ಸಮ್ಮೇಳನವನ್ನು ಸೆಪ್ಟೆಂಬರ್ ಮೊದಲ ವಾರಕ್ಕೆ ಮುಂದೂಡಲಾಗಿತ್ತು. ಶಿಕಾಗೋ ನಗರದ ಜೀವನ ದುಬಾರಿ. ಇವರ ಬಳಿ ಹಣ ಕಡಮೆ. ಅಲ್ಲಿ ಇವರನ್ನು ತಿಳಿದವರಾರೂ ಇಲ್ಲ. ಆಗ, ಯಾರೋ ಇವರಿಗೆ "ಬೋಸ್ಟನ್ನಿಗೆ ಹೋಗಿ, ಅಲ್ಲಿಯ ಜೀವನ ಇಷ್ಟು ದುಬಾರಿಯಲ್ಲ" ಎಂದು ಹೇಳಿದರು. ಇದ್ದ ಸ್ವಲ್ಪ ಹಣದಲ್ಲಿ ಜೀವನವನ್ನು



ತೂಗಿಸುವ ಯೋಚನೆ. ಹಾಗಾಗಿ ಬೋಸ್ಟನ್ನಿಗೆ ಪ್ರಯಾಣ ಬೆಳೆಸಿದರು. ರೈಲಿನಲ್ಲಿ ಶ್ರೀಮತಿ ಕೇಟ್ ಸ್ಯಾನ್‌ಬಾರ್ನ್ ಎಂಬ ಒಬ್ಬ ಶ್ರೀಮಂತ ಮಹಿಳೆಗೆ ಇವರಲ್ಲಿ ಗೌರವ ಹುಟ್ಟಿತು. ಮಾತುಕತೆಯ ನಂತರ ಆಕೆಗೆ ಸ್ವಾಮೀಜಿಯ ಜ್ಞಾನವೈಭವದ, ಅವರ ಸಹೃದಯತೆಯ ಪರಿಚಯವಾಯಿತು. ನಂತರ ವಿವೇಕಾನಂದರನ್ನು ತನ್ನ ಮೆಟ್‌ಕಾಫ್‌ನ 'ಬ್ರೀಜಿ ಮೆಡೋಸ್' ಎಂಬ ಮನೆಯಲ್ಲಿ ವಿಶೇಷ ಅತಿಥಿಯಂತೆ ನೋಡಿಕೊಂಡಿದ್ದು ಮಾತ್ರವಲ್ಲ, ತನ್ನ ಅನೇಕ ಪ್ರಮುಖ ಸ್ನೇಹಿತರಿಗೆ ಇವರೊಬ್ಬ ಸೋಜಿಗದ ವ್ಯಕ್ತಿಯೆಂಬಂತೆ ಪರಿಚಯಿಸಿದಳು. ಬಂದಿದ್ದವರಲ್ಲಿ ಪ್ರಮುಖರಾದವರು ಮಹಿಳಾ ಜೈಲಿನ ಅಧಿಕಾರಿಯಾದ ಶ್ರೀಮತಿ ಜಾನ್ಸನ್ ಮತ್ತು ವಿವೇಕಾನಂದರ ವಿಚಾರಗಳಿಂದ ಪ್ರಭಾವಿತರಾಗಿ ಶಿಕಾಗೋ ಸಮ್ಮೇಳನದ ಪ್ರತಿನಿಧಿಗಳ ಆಯ್ಕೆ ಸಮಿತಿಗೆ ಇವರ ಪ್ರತಿನಿಧಿತ್ವವನ್ನು ಶಿಫಾರಸು ಮಾಡಿದ ಹಾರ್ವರ್ಡ್ ವಿಶ್ವವಿದ್ಯಾನಿಲಯದ ಗ್ರೀಕ್ ಭಾಷಾ ಪ್ರಾಧ್ಯಾಪಕ ಡಬ್ಲ್ಯು .ಜೆ. ರೈಟ್. ವಿವೇಕಾನಂದರ ಬಳಿ ಪರಿಚಯ ಅಥವಾ ಶಿಫಾರಸಿನ ಯಾವ ಪತ್ರಗಳೂ ಇಲ್ಲವೆಂದು ತಿಳಿದಾಗ, ಇವರ ಪರಿಚಯಪತ್ರವನ್ನು ಕೇಳುವುದು ಸೂರ್ಯನನ್ನು ತಾನು ಪ್ರಕಾಶಿಸುವ ಹಕ್ಕನ್ನು ಕೇಳಿದಂತೆ ಎಂದು ಅವರು ಉದ್ಗರಿಸಿದರು!

ವಿವೇಕಾನಂದರು ಶ್ರೀಮತಿ ಜಾನ್ಸನ್‌ಳ ಜತೆ ಮಾತಾಡಿ, ಅಲ್ಲಿನ ಜೈಲನ್ನು ಸಂದರ್ಶಿಸಿದ ನಂತರ, ಭಾರತದ ಜೈಲುಗಳು, ಅಲ್ಲಿಯ ಕೈದಿಗಳನ್ನು ನೋಡಿಕೊಳ್ಳುವ ರೀತಿಯೊಂದಿಗೆ ಹೋಲಿಸಿ, ಹೀಗೆ ಬರೆಯುತ್ತಾರೆ: "ಇಲ್ಲಿ ಕಾರಾಗೃಹಗಳನ್ನು ಸುಧಾರಣಾಗೃಹಗಳೆಂದು ಕರೆಯುತ್ತಾರೆ. ಇಲ್ಲಿರುವವರನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಾರೆ. ಇಲ್ಲಿ ಖೈದಿಗಳ ನಡೆನುಡಿಗಳನ್ನು ಸುಧಾರಿಸುವರು, ಅವರನ್ನು ಸಮಾಜಕ್ಕೆ ಉಪಯುಕ್ತರನ್ನಾಗಿ ಮಾಡಿ ಕಳಿಸುವರು. ಇವೆಲ್ಲ ಎಷ್ಟು ಭವ್ಯ, ಉತ್ತಮ ಎಂದು ಗೊತ್ತಾಗಬೇಕಾದರೆ ಅದನ್ನು ಕಣ್ಣಾರೆ ಕಾಣಬೇಕು. ಭಾರತದಲ್ಲಿ ದೀನದಲಿತರಾದವರನ್ನು ನಾವು ಹೇಗೆ ನೋಡಿಕೊಳ್ಳುತ್ತೇವೆ ಎಂಬುದನ್ನು ಆಲೋಚಿಸಿದಾಗ ನನ್ನ ಹೃದಯ ನೊಂದು ಮರುಗಿತು. ದೀನರು, ದರಿದ್ರರು ಮತ್ತು ಅಪರಾಧಿಗಳಿಗೆ ಭರತ ಖಂಡದಲ್ಲಿ ತನ್ನವರೆಂಬುವವರಿಲ್ಲ, ಸಹಾಯ ಮಾಡುವವರಿಲ್ಲ. ಅವರೆಷ್ಟೇ ಪ್ರಯತ್ನಿಸಿದರೂ ಮತ್ತೆ ತಲೆಯೆತ್ತಲಾಗುವುದಿಲ್ಲ. ಅವರು ದಿನೇ ದಿನೇ ಕೆಳಕೆಳಕ್ಕೆ ಮುಳುಗುತ್ತಿದ್ದಾರೆ. ಕ್ರೂರ ಸಮಾಜದ ನಿರ್ದಯ ಆಘಾತಗಳ ಸುರಿಮಳೆಯನ್ನು ಎದುರಿಸುತ್ತಿದ್ದಾರೆ. ಅವರು ತಾವು ಮನುಷ್ಯರೆಂಬುದನ್ನೇ ಮರೆತುಬಿಟ್ಟಿರುವರು. ಅದರ ಪರಿಣಾಮವೇ ದಾಸ್ಯ.... ಕೆಲ ಬುದ್ಧಿವಂತರು ಇದರ ಪರಿಹಾರ ಹಿಂದೂ ಧರ್ಮದ ನಾಶದಿಂದ ಮಾತ್ರ ಸಾಧ್ಯವೆಂದು ಭಾವಿಸುತ್ತಾರೆ... ನಮ್ಮ ಧರ್ಮದಲ್ಲಿ ಏನೂ ದೋಷವಿಲ್ಲ. ನಮ್ಮ ಧರ್ಮ ನಮ್ಮಲ್ಲಿರುವ ಆತ್ಮನೇ ಸರ್ವಭೂತಗಳಲ್ಲಿಯೂ ಇರುವನು ಎಂದು ಸಾರುತ್ತದೆ. ಆದರೆ ಇದು ಈ ಸತ್ಯದ ಅನುಷ್ಠಾನ ಮಾಡದವರ ತಪ್ಪು, ಸಹಾನುಭೂತಿ, ಅನುಕಂಪ ತೋರದವರ ತಪ್ಪು" ಎನ್ನುತ್ತಾರೆ. ಇಂದಿಗೂ ನಮ್ಮ ಬಂದೀಖಾನೆಗಳು ಸುಧಾರಿಸಿಲ್ಲ. ಜೈಲಿನ ಕೈದಿಗಳ ಸುಧಾರಣೆಗೆ ಶ್ರೀಮತಿ ಕಿರಣ್ ಬೇಡಿಯವರು ಬಹಳ ಶ್ರಮಪಟ್ಟರು; ಅನೇಕ ಸಂಸ್ಥೆಗಳು ಈ ಕೆಲಸಗಳನ್ನು ಮಾಡುತ್ತಿವೆ. ಇದರ ತಳಹದಿ ಸ್ವಾಮಿ ವಿವೇಕಾನಂದರ ಅನುಭವದ ಮಾತುಗಳು ಎಂದರೆ ತಪ್ಪಾಗಲಾರದಲ್ಲವೆ? ಅನೇಕ ಸಂಸ್ಥೆಗಳು, ಜನಪ್ರತಿನಿಧಿಗಳು ಸ್ವಾತಂತ್ರ್ಯ ದಿನೋತ್ಸವ, ಗಾಂಧಿ ಜಯಂತಿ ಮುಂತಾದ ದಿನಗಳಲ್ಲಿ ಜೈಲುಗಳಿಗೆ ಹೋಗಿ, ಕೈದಿಗಳಿಗೆ ಹಣ್ಣು ಹಂಪಲುಗಳನ್ನು ಕೊಡುವುದೋ, ಅವರಿಗೆ ಭಾಷಣ ಮಾಡುವುದೋ, ಅವರಿಂದ ಪ್ರಾರ್ಥನೆಗಳನ್ನು, ಮನರಂಜನೆಯ ಕಾರ್ಯಕ್ರಮವನ್ನು ಮಾಡಿಸಿ ತಮ್ಮ ಭಾವಚಿತ್ರಗಳನ್ನು ಪತ್ರಿಕೆಗಳಲ್ಲಿ ಹಾಕಿಸಿಕೊಳ್ಳುವುದೋ ಬಿಟ್ಟರೆ ಹೆಚ್ಚಿನ ಕಾರ್ಯಕ್ರಮಗಳಾಗುತ್ತಿಲ್ಲ. ಎಲ್ಲ ಜೈಲುಗಳಲ್ಲಿಯೂ ಸುಧಾರಣೆಗಳಾಗಬೇಕು. ಇದಕ್ಕೆ ಸರಕಾರ ಮಾತ್ರವಲ್ಲ, ಸಮಾಜ, ಸಾಮಾನ್ಯ ಜನರು ಹಾಗೂ ಸಂಸ್ಥೆಗಳೂ ಅವಿರತವಾಗಿ ಶ್ರಮಿಸಬೇಕಾಗಿದೆ.

ಅಮೆರಿಕದ ಪ್ರವಾಸದಲ್ಲಿರುವಾಗ ಒಂದು ಟ್ರಾಮ್‌ಗಾಡಿಯಲ್ಲಿ ಒಬ್ಬ ಶ್ರೀಮಂತ ಮಹಿಳೆ, ಇನ್ನೊಬ್ಬ ಒಗೆಯುವ ಬಟ್ಟೆಯ ಬುಟ್ಟಿಯನ್ನಿಟ್ಟುಕೊಂಡಿದ್ದ (ಅಗಸಗಿತ್ತಿ) ನೀಗ್ರೋ ಮಹಿಳೆಯೊಂದಿಗೆ ಒಂದೇ ಸೀಟಿನಲ್ಲಿ ಕುಳಿತು ಲೋಕಾಭಿರಾಮವಾಗಿ ಮಾತನಾಡುತ್ತಾ ಹೋಗುವುದನ್ನು ನೋಡಿ ಅಲ್ಲಿಯ ಜನರ, ಅದರಲ್ಲೂ ಮಹಿಳೆಯರ ಉತ್ತಮ ಗುಣವನ್ನು ಸ್ವಾಮೀಜಿ ತುಂಬಾ ಶ್ಲಾಘಿಸುತ್ತಾರೆ. ಮೇಲು ಕೀಳುಗಳಿಲ್ಲದ ತಾಳಮೇಳಗಳಿಂದ ಮಾನವ ಮಾನವ ಸಂಬಂಧವನ್ನು ಹೊಂದಿರುವುದು ಆ ಸಮಾಜದ ಸೊಗಸು ಎನ್ನುತ್ತಾರೆ. ಇವುಗಳ ಹಿನ್ನೆಲೆಯಲ್ಲಿ ಖೇತ್ರಿ ಮಹಾರಾಜರಿಗೆ ೧೮೯೪ ರಲ್ಲಿ ಬರೆದ ಪತ್ರದಲ್ಲಿ ಅವರು, "ಅಮೆರಿಕದ ಗೃಹಿಣಿಯರ ವಿಚಾರವಾಗಿ ನಾನು ಎಷ್ಟೋ ಕತೆಗಳನ್ನು ಕೇಳಿದ್ದೆ. ಅವರು ಸ್ವತಂತ್ರರು, ಮುಕ್ತವಾಗಿರುವವರು, ತಮ್ಮ ಸ್ವಾತಂತ್ರ್ಯದ ಹುಚ್ಚು ಕುಣಿತದಲ್ಲಿ ಗಾಂಭೀರ್ಯವನ್ನು ತ್ಯಜಿಸಿ ಮನೆಯ ಶಾಂತಿ ಸೌಹಾರ್ದವನ್ನು ಹಾಳು ಮಾಡಿರುವವರು ಎಂದೆಲ್ಲ ಕೇಳಿದ್ದೆ. ಒಂದು ವರ್ಷ ಅಮೆರಿಕದ ಮನೆಗಳ ಮತ್ತು ಇಲ್ಲಿಯ ಸ್ತ್ರೀಯರ ಅಂತಸ್ಸತ್ವವನ್ನು ತಿಳಿದ ಮೇಲೆ ಇಂತಹ ಸಮಾಚಾರಗಳು ಸುಳ್ಳು ಎನ್ನುವುದು ನನಗೆ ಗೊತ್ತಾಗಿದೆ. ಅಮೆರಿಕದ ನಾರಿಯರೇ! ನನ್ನ ಕೃತಜ್ಞತೆಯನ್ನು ತೋರಿಸುವುದಕ್ಕೆ ನೂರು ಜನ್ಮಗಳು ಸಾಲವು... ... ಎಷ್ಟು ಸುಂದರ ಮನೆಗಳನ್ನು ನಾನು ನೋಡಿರುವೆನು. ಚಾರಿತ್ರ್ಯ ಶುದ್ಧಿ, ಮಕ್ಕಳ ಮೇಲೆ ಅನುಪಮ ನಿಸ್ವಾರ್ಥ ಪ್ರೇಮದಿಂದ ಕೂಡಿದ ಎಷ್ಟೊಂದು ಜನ ತಾಯಂದಿರಿರುವರು! ಎಷ್ಟು ಜನ ಹೆಣ್ಣುಮಕ್ಕಳು, 'ಡಯಾನ ದೇವಸ್ಥಾನದ ಕಳಶದಂತೆ' ಇರುವ ಕಳಂಕಹೀನ ಅವಿವಾಹಿತರು – ಜೊತೆಗೆ ಅತ್ಯುತ್ತಮ ಸಂಸ್ಕೃತಿ, ವಿದ್ಯೆ, ಆಧ್ಯಾತ್ಮಿಕತೆ!" ಎಂದು ಉದ್ಗರಿಸುತ್ತಾರೆ.

ಅಲ್ಲಿಯ ಶೈಕ್ಷಣಿಕ ನೀತಿ ಆಡಳಿತಗಳ ಬಗ್ಗೆ ಬರೆಯುತ್ತ, "ಭರತಖಂಡದ ಅನೇಕ ವಿದ್ಯಾವಂತ ಯುವಕರಿಗಿಂತ, ಬಹುಶಃ ರಾಜರಿಗಿಂತ ಕೂಡ, ಅಮೆರಿಕದ ಒಬ್ಬ ರೈಲ್ವೆ ಪೋರ್ಟರ್ ಎಷ್ಟೋ ವಿದ್ಯಾವಂತನಾಗಿದ್ದಾನೆ; ಬಹುಜನ ಹಿಂದೂ ಸ್ತ್ರೀಯರು ಊಹಿಸುವುದಕ್ಕಿಂತ ಅಧಿಕವಾಗಿ ಅಮೆರಿಕದ ಪ್ರತಿಯೊಬ್ಬ ಸ್ತ್ರೀಯೂ ವಿದ್ಯಾವಂತೆಯಾಗಿದ್ದಾಳೆ; ಅಂತಹ ವಿದ್ಯಾಭ್ಯಾಸವನ್ನು ನಾವೇಕೆ ನಮ್ಮಲ್ಲಿ ತರಬಾರದು?" – ಹೀಗೆಲ್ಲ ಸ್ವಾಮೀಜಿ ತಮ್ಮನ್ನು ತಾವೇ ಕೇಳಿಕೊಳ್ಳುತ್ತಾರೆ.

ಮಹಿಳೆಯರಿಗೆ ಸಮಾನ ಹಕ್ಕನ್ನು ಕೊಟ್ಟು, ಅವರನ್ನು ವಿದ್ಯಾವಂತರನ್ನಾಗಿ ಮಾಡುವ ಅಮೆರಿಕ ಸಮಾಜದ ಸಂಸ್ಕೃತಿಯನ್ನು ನೋಡಿ ಅದರಿಂದ ಪಾಠ ಕಲಿಯಬೇಕೆನ್ನುವುದೇ ವಿವೇಕಾನಂದರ ಭಾವನೆ. ನಮ್ಮ ದೇಶದಲ್ಲಿ ಹಿಂದೆ ವೇದವೇದಾಂತಗಳಲ್ಲಿ ಪರಿಣತರಾದ ಮಹಿಳೆಯರಿದ್ದರೂ, ನಂತರದ ಸಮಯದಲ್ಲಿ, ಕೆಲ ಕೊಳಕು